




**ಆಧಾರ** : ಜನಪದ ಕಥೆ ; **ನಿರೂಪಣೆ:** ಡಿ.ಕೆ. ಈರೇಗೌಡ;
**ಚಿತ್ರ** : ಪಿ. ಪುರುಷೋತ್ತಮ ಕಾರಂತ್

ಒಂದು ಕಾಡು. ಅಲ್ಲೊಬ್ಬ ಸಾಧು. ಅವರಿಗೊಬ್ಬ ಶಿಷ್ಯ. ಗುರುಗಳ ಸೇವೆಯನ್ನು ನಿಷ್ಠೆಯಿಂದ ಮಾಡುತ್ತಾ, ಅವರ ಬೋಧನೆಯನ್ನು ಚಾಚೂ ತಪ್ಪದೆ ಪಾಲಿಸುತ್ತಾ, ಆಧ್ಯಾತ್ಮಿಕ ಸಾಧನೆಯಲ್ಲಿ ಮುಂದುವರಿಯುತ್ತಿದ್ದ. ಗುರುಗಳು ಹೇಳುತ್ತಿದ್ದರು, 'ಸಾಧಕನು ಯಾವಾಗಲೂ ತುಂಬ ಎಚ್ಚರದಿಂದ ಇರಬೇಕು. ಕಾಮ, ಕ್ರೋಧ, ಮದ, ಮತ್ಸರ, ಹೆಣ್ಣು ಇವುಗಳಿಂದ ದೂರವಿರಬೇಕು. ಅದರಲ್ಲೂ ಹೆಣ್ಣಿನ ವಿಷಯದಲ್ಲಿ ಬಹಳ ಜಾಗರೂಕನಾಗಿರಬೇಕು. ಹೆಣ್ಣನ್ನು ನೋಡಬಾರದು, ಮಾತನಾಡಿಸಬಾರದು. ವಿಶ್ವಾಮಿತ್ರನಂಥವರೇ ಹೆಣ್ಣಿಗಾಗಿ ಜಾರಿದರೆಂದಮೇಲೆ, ಸಾಮಾನ್ಯರ ಪಾಡೇನು? ಆದ್ದರಿಂದ ಯಾವಾಗಲೂ ಎಚ್ಚರಿಕೆಯಿಂದಿರು", ಇತ್ಯಾದಿ. ಶಿಷ್ಯನಿಗೆ ಗುರುವಿನಲ್ಲಿ ಬಹಳ ಭಕ್ತಿ. ಅವರ ಮಾತಿನಲ್ಲಿ ಬಹಳ ಗೌರವ, ನಂಬಿಕೆ.

ಹೀಗಿರುವಾಗ, ಒಂದು ದಿನ ಗುರುಶಿಷ್ಯರಿಬ್ಬರೂ ನದಿ ದಾಟಬೇಕಾಗಿ ಬಂತು. ಆಗ ತಾನೆ ಮಳೆ ಬಿದ್ದು ನದಿಯಲ್ಲಿ ನೀರು ಉಕ್ಕಿ ಹರಿಯುತ್ತಿತ್ತು. ನದಿದಡದಲ್ಲಿ ಹಾಲು ಮಾರುವ ಹುಡುಗಿಯೊಬ್ಬಳು ನಿಂತಿದ್ದಳು. ಅವಳು ಹಾಲು ಮಾರಿಯಾದ ಮೇಲೆ ತನ್ನ ಊರಿಗೆ ಹಿಂದಿರುಗಿ ಹೋಗಬೇಕಾಗಿತ್ತು. ಆದರೆ ನದಿಯಲ್ಲಿ ಆಗತಾನೆ ಬಿದ್ದ ಮಳೆಯಿಂದಾಗಿ ನೀರು ತುಂಬಿ ಹರಿಯುತ್ತಿತ್ತು. ಅವಳು ಅಸಹಾಯಕಳಾಗಿ ಪರಿತಪಿಸುತ್ತಿದ್ದಳು. ಗುರುಗಳನ್ನು ಕಂಡಾಕ್ಷಣ ಅವರ ಕಾಲಿಗೆರಗಿ, ತನ್ನನ್ನು ಆಚೆ ದಡಕ್ಕೆ ದಾಟಿಸಬೇಕೆಂದು ಬೇಡಿಕೊಂಡಳು. ಈ ಹುಡುಗಿಯ ಅಸಹಾಯಕತೆಯನ್ನು ಕಂಡ ಗುರುಗಳ ಮನಸ್ಸು ಕರಗಿತು. ಆ ಹುಡುಗಿಯನ್ನು ತಮ್ಮ ಹೆಗಲ ಮೇಲೆ ಕೂರಿಸಿಕೊಂಡು ಆಚೆ ದಡ ಮುಟ್ಟಿಸಿದರು. ಗುರುಗಳಿಗೆ ಕೃತಜ್ಞತೆ ಸಲ್ಲಿಸಿ ಆಕೆ ಹೊರಟುಹೋದಳು.

ಶಿಷ್ಯನಿಗೆ ಗುರುಗಳ ನಡತೆ ಸ್ವಲ್ಪವೂ ಹಿಡಿಸಲಿಲ್ಲ. ಇವರು ಕಪಟಿ ಎಂದು ಭಾವಿಸಿದ. ಹಾಗೆಂದು ಗುರುಗಳನ್ನು ನಿಂದಿಸಿದ. "ನಿಮ್ಮಂಥ ಕಪಟಿಗಳನ್ನು ನಂಬಿ ನನ್ನ ಬದುಕು ಹಾಳಾಯಿತು", ಎಂದು ದೂರಿದ. "ನೀವು ಹೇಳುವುದೊಂದು ಮಾಡುವುದೊಂದು. ನಿಮ್ಮಿಂದ ನನ್ನ ಜೀವನವೇ ವ್ಯರ್ಥವಾಯಿತು. ನಿಮಗೆ ಧಿಕ್ಕಾರ..." ಇತ್ಯಾದಿ ಗುರುಗಳನ್ನು ನಿಂದಿಸುತ್ತಲೇ ಸಾಗಿದ. ಗುರುಗಳು ಏನನ್ನೂ ಮಾತನಾಡಲಿಲ್ಲ. ಮೌನವಾಗಿಯೇ ಹೆಜ್ಜೆ ಹಾಕಿದರು. ಶಿಷ್ಯ ಏನೆಲ್ಲಾ ನಿಂದಿಸಿದರೂ 'ಮೌನ'ವೇ ಉತ್ತರವಾಗಿತ್ತು.

ಹೀಗೆ ಹೋಗುತ್ತಿರುವಾಗ ಅನತಿ ದೂರದಲ್ಲಿ ಒಂದು ಹಳ್ಳಿ ಸಿಕ್ಕಿತು. ಊರ ಮುಂದೆ ಒಬ್ಬ ಕಮ್ಮಾರ ಕುಲುಮೆ ಹಾಕಿದ್ದ. ನದಿಯಲ್ಲಿ ತೊಯ್ದುಬಂದಿದ್ದ ಗುರುಶಿಷ್ಯರಿಬ್ಬರೂ ಬೆಂಕಿ ಕಾಯಿಸಿಕೊಳ್ಳಲು ಅದರ ಮುಂದೆ ಕುಳಿತರು. ಶಿಷ್ಯ ನಿನ್ನೂ ವಟಗುಟ್ಟುತ್ತಲೇ ಇದ್ದ. ಕಮ್ಮಾರ ಕಾಯ್ದ ಕಬ್ಬಿಣ ಬಡಿಯುವಾಗ ಒಂದು ತುಂಡು ಹಾರಿ ಕೆಳಗೆ ಬಿತ್ತು. ಗುರುಗಳು ಅದನ್ನು ತೆಗೆದುಕೊಂಡು ಗಬಕ್ಕನೆ ನುಂಗಿದರು. ಶಿಷ್ಯ 'ಮಿಕಿಮಿಕಿ' ಕಣ್ಣು ಬಿಟ್ಟು ನೋಡಿದ. ಇದೇನು ಅದ್ಭುತವಪ್ಪಾ! ತನ್ನ ತಪ್ಪಿನ ಅರಿವಾಯಿತು. ಅವರಲ್ಲಿ ಶರಣಾದ!

**ಹೇಳಿದ್ದೆ ಹೇಳುವರು ಕೇಳಿದ್ದೆ ಕೇಳುವರು**
**ಕೇಳಿದ್ದೆ ಕೇಳಿ ಸುಖಿಸುವರು – ಗುರುಗಳ**
**ಹೇಳಿಕೆಯೆ ಬೇರೆ ಸರ್ವಜ್ಞ**